ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-02-1994.

# *ತ್ರಿಕಾಲದರ್ಶಿ ಸ್ಥಿತಿ ಎಂಬ ಶ್ರೇಷ್ಠ ಆಸನದಿಂದ ಸದಾ ವಿಜಯಿಯಾಗಿರಿ.*

(त्रिकालदर्शी स्थिति के श्रेष्ठ आसन द्वारा सदा विजयी बनो)

**ದಿವ್ಯ ಬುದ್ಧಿ ಅಥವಾ ವಿಶಾಲ ಬುದ್ಧಿಯ ವರದಾನವನ್ನು ಕೊಡುವ ಬಾಪ್‌ದಾದಾ ತನ್ನ ಮಾಸ್ಟರ್ ತ್ರಿಕಾಲದರ್ಶಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ತ್ರಿಕಾಲದರ್ಶಿ ಬಾಪ್‌ದಾದಾ ತನ್ನ ಮಾಸ್ಟರ್ ತ್ರಿಕಾಲದರ್ಶಿ ಮಕ್ಕಳನ್ನು ನೋಡುತ್ತಿದ್ದಾರೆ. ತ್ರಿಕಾಲದರ್ಶಿಯಾಗುವ ಸಾಧನವಾದ ದಿವ್ಯಬುದ್ಧಿಯ ವರದಾನವನ್ನು ಅಥವಾ ಬ್ರಾಹ್ಮಣ ಜನ್ಮದ ವಿಶೇಷ ಬಹುಮಾನವನ್ನು ಬಾಪ್‌ದಾದಾ ಪ್ರತಿಯೊಬ್ಬ ಮಗುವಿಗೆ ಕೊಟ್ಟಿದ್ದಾರೆ ಏಕೆಂದರೆ ದಿವ್ಯಬುದ್ಧಿಯಿಂದಲೇ ತಂದೆಯನ್ನು, ಸ್ವಯಂನ್ನು, ಮತ್ತು ಮೂರು ಕಾಲಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ದಿವ್ಯ ಬುದ್ಧಿ ಅಥವಾ ಸ್ಮೃತಿಯಿಂದಲೇ ಸರ್ವಶಕ್ತಿಗಳನ್ನು ಧಾರಣೆ ಮಾಡಬಲ್ಲರು ಆದ್ದರಿಂದ ಮೊದಲ ವರದಾನ ದಿವ್ಯಬುದ್ಧಿ. ಈ ವರದಾನವನ್ನು ಬಾಪ್‌ದಾದಾ ಮಕ್ಕಳೆಲ್ಲರಿಗೂ ಕೊಟ್ಟಿದ್ದಾರೆ ಆದರೆ ಈ ವರದಾನವನ್ನು ಪ್ರತ್ಯಕ್ಷ ಜೀವನದಲ್ಲಿ ನಂಬರ್‌ವಾರ್‌ಆಗಿ ಕಾರ್ಯದಲ್ಲಿ ಉಪಯೋಗಿಸುತ್ತಿದ್ದಾರೆ. ದಿವ್ಯ ಬುದ್ಧಿ ತ್ರಿಕಾಲದರ್ಶಿಸ್ಥಿತಿಯನ್ನು ಅನುಭವ ಮಾಡಿಸುತ್ತದೆ ನಾಲ್ಕು ಸಬ್ಜೆಕ್ಟ್ ಗಳನ್ನು ಧಾರಣೆ ಮಾಡಲು ಆಧಾರ ದಿವ್ಯಬುದ್ಧಿ. ನಾಲ್ಕು ಸಬ್ಜೆಕ್ಟ್ ಗಳ ಬಗ್ಗೆ ಮಕ್ಕಳೆಲ್ಲರಿಗೂ ಬಹಳ ಚೆನ್ನಾಗಿ ತಿಳಿದಿದೆ ಮತ್ತು ವರ್ಣನೆ ಕೂಡ ಮಾಡುತ್ತೀರಿ ಆದರೆ ತಿಳಿದುಕೊಳ್ಳುವುದು ವರ್ಣನೆ ಮಾಡುವುದು ಎಲ್ಲರಿಗೂ ಬರುತ್ತದೆ. ಹೊಸಬರಾದರು ಹಳೆಬರಾದರು ಇದರಲ್ಲಿ ಎಲ್ಲರೂ ತಿಳುವಳಿಕೆಯುಳ್ಳವರೇ ಆದರೆ ಧಾರಣೆ ಮಾಡುವುದರಲ್ಲಿ ನಂಬರ್‌ವಾರ್ ಆಗುತ್ತಿದ್ದೀರಿ. ದಿವ್ಯ ಬುದ್ಧಿಯ ವಿಶೇಷತೆಗಳು- ದಿವ್ಯಬುದ್ಧಿಯುಳ್ಳ ಆತ್ಮರು ಯಾವ ಸಂಕಲ್ಪನ್ನಾದರೂ ಕರ್ಮ ಅಥವಾ ವಾಣಿಯಲ್ಲಿ ತರುವ ಮೊದಲು ಪ್ರತಿ ಮಾತು ಮತ್ತು ಕರ್ಮದ ಮೂರು ಕಾಲಗಳನ್ನು ತಿಳಿದುಕೊಂಡು ಪ್ರತ್ಯಕ್ಷದಲ್ಲಿ ತರುತ್ತಾರೆ. ಸಾಧಾರಣ ಬುದ್ಧಿ ಇರುವ ಆತ್ಮರು ವರ್ತಮಾನದ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾರೆ ಆದರೆ ಭವಿಷ್ಯವನ್ನು ಮತ್ತು ಭೂತಕಾಲವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲಾಗುವುದಿಲ್ಲ. ಆದರೆ ದಿವ್ಯಬುದ್ಧಿ ಆತ್ಮರಿಗೆ ಭವಿಷ್ಯ ಮತ್ತು ಭೂತಕಾಲ ಕೂಡ ವರ್ತಮಾನವಷ್ಟು ಸ್ಪಷ್ಟವಾಗಿ ಇರುತ್ತವೆ ಮೂರು ಕಾಲಗಳು ಜೊತೆಜೊತೆಗೆ ಸ್ಪಷ್ಟವಾಗಿ ಅನುಭವವಾಗುತ್ತದೆ. ಸಾಧಾರಣವಾಗಿಯೂ ಹೇಳುತ್ತಾರೆ ಯಾವುದನ್ನು ಯೋಚಿಸಿದರೂ, ಮಾಡಿದರೂ, ಮಾತನಾಡಿದರೂ ಹಿಂದೆಮುಂದೆ ಯೋಚಿಸಿ ಅರ್ಥ ಮಾಡಿಕೊಂಡು ಮಾಡಿರಿ ಎಂದು. ಕರ್ಮ ಮಾಡುವ ಮೊದಲು ಕರ್ಮದ ಪರಿಣಾಮವನ್ನು ಎದುರಿಗೆ ಇಟ್ಟುಕೊಳ್ಳಿರಿ. ಪರಿಣಾಮ ಅರ್ಥಾತ್ ಭವಿಷ್ಯ ಆದ್ದರಿಂದ ಮೊದಲನಂಬರ್ ತ್ರಿಕಾಲದರ್ಶಿಬುದ್ಧಿ ತ್ರಿಕಾಲದರ್ಶಿ ಬುದ್ಧಿಯುಳ್ಳವರು ಯಾವಾಗಲೂ ಅಸಫಲತೆಯನ್ನು ಅನುಭವ ಮಾಡಿಕೊಳ್ಳುವುದಿಲ್ಲ ಆದರೆ ಮಕ್ಕಳಲ್ಲಿ ಮೂರು ವಿಧವಾದ ಬುದ್ಧಿ ಇರುವವರು ಇದ್ದಾರೆ.  1.ಸದಾ ತ್ರಿಕಾಲದರ್ಶಿ ಬುದ್ಧಿ, 2.ಆಗಾಗ ತ್ರಿಕಾಲದರ್ಶಿ

ಆಗಾಗ ಏಕಕಾಲದರ್ಶನದ ಬುದ್ಧಿ, 3.ಸೋಮಾರಿತನದ(ಆಲಸ್ಯ) ಬುದ್ಧಿ. ಇವರು ಸದಾ ವರ್ತಮಾನವನ್ನು ನೋಡುತ್ತಾ ಇದೇ ಯೋಚಿಸುತ್ತಾರೆ- ಈಗ ಏನು ನಡೆಯುತ್ತಿದೆಯೋ ಅಥವಾ ಲಭಿಸುತ್ತಿದೆಯೋ ಅಥವಾ ನಡೆಯುತ್ತಿದ್ದೇವೆಯೋ ಇದರಲ್ಲಿ ಚೆನ್ನಾಗಿದ್ದರೆ ಸಾಕು ಭವಿಷ್ಯ ಏನಾಗುತ್ತದೆ ಎಂದು ಯೋಚಿಸುವುದು ಏಕೆ ಎಂದು ತಿಳಿಯುತ್ತಾರೆ. ಆದರೆ ಸೋಮಾರಿತನದ ಬುದ್ಧಿಯ ಕಾರಣದಿಂದ ಆದಿ, ಮಧ್ಯ, ಅಂತ್ಯಗಳನ್ನು ಯೋಚಿಸದ ಕಾರಣವಾಗಿ ಸದಾ ಸಫಲತೆಯನ್ನು ಪಡೆಯುವುದರಲ್ಲಿ ಮೋಸ ಹೋಗುತ್ತಾರೆ. ತ್ರಿಕಾಲದರ್ಶಿ ಬುದ್ಧಿಯುಳ್ಳವರಾಗಬೇಕು. ತ್ರಿಕಾಲದರ್ಶಿ ಸ್ಥಿತಿ ಎಂತಹ ಶ್ರೇಷ್ಠ ಆಸನವೆಂದರೆ ಈ ಆಸನ ಅರ್ಥಾತ್ ಸ್ಥಿತಿಯಿಂದ ಸ್ವಯಂ ಕೂಡ ಸದಾ ವಿಜಯಿಯಾಗಿ, ಇತರರು ಕೂಡ ವಿಜಯಿಯಾಗುವ ಶಕ್ತಿ ಅಥವಾ ಸಹಯೋಗವನ್ನು ಕೊಡುವವರಂತೆ ಆಗಬಲ್ಲಿರಿ. ದಿವ್ಯಬುದ್ಧಿ ಅರ್ಥಾತ್ ವಿಶಾಲ ಬುದ್ಧಿ, ದಿವ್ಯಬುದ್ಧಿ ಅರ್ಥಾತ್ ಬೇಹದ್ ಬುದ್ಧಿ ಆದ್ದರಿಂದ ಸ್ವಯಂನ ಬುದ್ಧಿ ಯಾವ ನಂಬರ್‌ನಲ್ಲಿ ಇದೆ ಎಂಬುದನ್ನು ಪರಿಶೀಲಿಸಿಕೊಳ್ಳಿರಿ ಬಾಪ್‌ದಾದಾ ಮಕ್ಕಳ ಫಲಿತಾಂಶದಲ್ಲಿ ಏನನ್ನು ನೋಡಿದರು. ಜ್ಞಾನ, ಗುಣ, ಶಕ್ತಿಯ ಖಜಾನೆಗಳು ಮಕ್ಕಳೆಲ್ಲರ ಹತ್ತಿರ ಜಮಾ ಆಗಿವೆ. ಜಮಾ ಆದಾಗಲೂ ನಂಬರ್‌ವಾರ್‌ಆಗಿ ಏಕೆ ಇದ್ದಾರೆ. ಯಾರ ಹತ್ತಿರವೂ ಖಜಾನೆ ಜಮಾ ಆಗಿಲ್ಲ ಎಂಬಂತೆ ಇಲ್ಲ. ಹೀಗೆ ಯಾರೂ ಇಲ್ಲ. ಎಲ್ಲರ ಹತ್ತಿರವೂ ಜಮಾ ಇದೆಯಲ್ಲವೇ? ಆದಾಗಲು ನಂಬರ್‌ವಾರ್ ಏಕೆ? ಒಂದು ವೇಳೆ ಯಾರಿಗಾದರೂ ಸ್ವಯಂನ ಜ್ಞಾನ, ತಂದೆಯ ಜ್ಞಾನ, ಚಕ್ರದ ಜ್ಞಾನ, ಕರ್ಮಗಳ ಗುಹ್ಯಗತಿಯ ಜ್ಞಾನ ಇದೆಯೇ ಎಂದು ಕೇಳಿದರೆ ಎಲ್ಲರ ಹತ್ತಿರವು ಇದೆ, ಎಲ್ಲರ ಹತ್ತಿರವೂ ಸರ್ವಶಕ್ತಿಗಳು ಇವೆಯೇ ಅಥವಾ ಕೆಲವು ಇವೆ ಕೆಲವು ಇಲ್ಲವೇ? ಜ್ಞಾನದಲ್ಲಂತೂ ಎಲ್ಲರೂ ಇದೆ ಎಂದಿದ್ದೀರಿ ಆದರೆ ಶಕ್ತಿಗಳ ವಿಷಯದಲ್ಲಿ ಇವೆ ಎಂದು ಏಕೆ ಹೇಳುತ್ತಿಲ್ಲ? ಒಳ್ಳೆಯದು ಎಲ್ಲಾ ಗುಣಗಳು ಇವೆಯೇ ಸರ್ವ ಗುಣಗಳು ಬುದ್ಧಿಯಲ್ಲಿ ಇವೆಯೇ ಬುದ್ದಿಯಲ್ಲಿ ಜ್ಞಾನವೂ ಇದೆ, ಶಕ್ತಿಗಳೂ ಇವೆ. ಆದಾಗಲೂ ನಂಬರ್‌ವಾರ್ ಏಕೆ? ಅಂತರವೇನಿರುತ್ತದೆ? ಆ ಸಮಯದ ನಂತರ ಹೀಗೆ ಮಾಡಿದ್ದರೆ ಈ ವಿಧಿ ಪ್ರಕಾರ ನಡೆದಿದ್ದರೆ ಸಿದ್ದಿ ಲಭಿಸುತ್ತಿತ್ತು ಎಂದುಕೊಳ್ಳುತ್ತಿದ್ದೀರಿ. ಸಮಯವನ್ನು ತಿಳಿದುಕೊಳ್ಳುವುದು ಮತ್ತು ಸಮಯ ಪ್ರಮಾಣವಾಗಿ ಶಕ್ತಿಗಳನ್ನು, ಗುಣಗಳನ್ನು ಅಥವಾ ಜ್ಞಾನವನ್ನು ಕಾರ್ಯದಲ್ಲಿ ಉಪಯೋಗಿಸುವುದು ಇದಕ್ಕಾಗಿ ದಿವ್ಯಬುದ್ಧಿಯ ವಿಶೇಷತೆ ಅವಶ್ಯಕವಾಗಿದೆ. ಬಹಳ ಯೋಚಿಸುತ್ತಿದ್ದೀರಿ ಹೇಳುತ್ತಲೂ ಇರುತ್ತೀರಿ. ಪುಸ್ತಕಗಳಲ್ಲಿ ಕೂಡ ಬರೆದಿರುತ್ತೀರಿ, ಎಲ್ಲರ ಹತ್ತಿರ ಎಷ್ಟು ಡೈರಿಗಳಿವೆ. ಬಹಳ ಸ್ಟಾಕ್ ಆಗಿವೆ ತಾನೇ ಬಾಬಾನ ಬಗ್ಗೆ ಮಹಿಮೆ ಇದೆಯಲ್ಲವೇ ನಾನು ಯಾರೋ, ಹೇಗಿರುವೆನೋ ಹಾಗೆ ನನ್ನನ್ನು ಕೋಟಿಯಲ್ಲಿ ಕೆಲ ಮಂದಿ ತಿಳಿದುಕೊಳ್ಳುತ್ತಾರೆ ಎಂದು. ತಿಳಿದುಕೊಳ್ಳುವುದಾದರೆ ಎಲ್ಲರೂ ತಿಳಿದುಕೊಳ್ಳುತ್ತಾರೆ ಆದರೆ ಅಂಡರ್ ಲೈನ್ ಮಾಡಬೇಕಾಗಿರುವ ವಿಷಯವೇನೆಂದರೆ ಯಾರು ಹೇಗಿರುವಿರೋ ಹಾಗೆ ತಿಳಿದುಕೊಳ್ಳುವುದರಲ್ಲಿ ಅಂತರವಾಗುತ್ತಿದೆ. ಅದೇ ರೀತಿಯಾಗಿ ಎಂತಹ ಸಮಯವೋ ಮತ್ತು ಆ ಸಮಯಕ್ಕೆ ಜ್ಞಾನದ ಯಾವ ಪಾಯಿಂಟ್ಸ್ ಅಥವಾ ಗುಣ ಅಥವಾ ಶಕ್ತಿಯ ಅವಶ್ಯಕತೆ ಇದೆಯೋ ಹಾಗೆಯೇ ಕಾರ್ಯದಲ್ಲಿ ಉಪಯೋಗಿಸುವುದರಲ್ಲಿ ಅಂತರ ಬರುತ್ತಿದೆ ಮತ್ತು ಈ ಅಂತರದಿಂದಲೇ ನಂಬರ್ ತಯಾರಾಗುತ್ತಿದೆ. ಕಾರಣ ಅರ್ಥವಾಯಿತೆ?

1.ಸಮಯಾನುಸಾರವಾಗಿ ಉಪಯೋಗಿಸುವ ವಿಧಿಯಲ್ಲಿ ಅಂತರ ಬರುತ್ತಿದೆ. 2.ಯಾವ ಕರ್ಮ ಅಥವಾ ಸಂಕಲ್ಪವನ್ನೂ ತ್ರಿಕಾಲದರ್ಶಿಯಾಗಿ ಮಾಡುತ್ತಿಲ್ಲ. ಆದ್ದರಿಂದಲೇ ನಂಬರ್ ತಯಾರಾಗುತ್ತಿದೆ. ಯಾವ ಸಂಕಲ್ಪವಾದರೂ

ಬುದ್ಧಿಯಲ್ಲಿ ಬರುತ್ತಿದ್ದರೆ ಸಂಕಲ್ಪವೆಂಬುದು ಬೀಜ. ವಾಚಾ ಮತ್ತು ಕರ್ಮ ಎಂಬುದು ಬೀಜದ ವಿಸ್ತಾರ. ಆದ್ದರಿಂದ ಸಂಕಲ್ಪ ಅರ್ಥಾತ್ ಬೀಜವನ್ನು ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾಗಿ ಪರಿಶೀಲಿಸಿಕೊಳ್ಳಿರಿ ಮತ್ತು ಶಕ್ತಿಶಾಲಿಯಾಗಿ ಮಾಡಿಕೊಂಡರೆ ವಾಣಿ ಮತ್ತು ಕರ್ಮದಲ್ಲಿ ಸ್ವತಹವಾಗಿ, ಸಹಜ ಸಫಲತೆ ಲಭಿಸುತ್ತದೆ. ಸಂಕಲ್ಪವನ್ನು ಪರಿಶೀಲಿಸಿಕೊಳ್ಳುತ್ತಿಲ್ಲ ಅರ್ಥಾತ್ ಬೀಜ ಶಕ್ತಿಶಾಲಿಯಾಗಿರದಿದ್ದಾಗ ವಾಣಿ ಮತ್ತು ಕರ್ಮದಲ್ಲಿ ಕೂಡ ಸಿದ್ಧಿಯ ಶಕ್ತಿ ಇರುತ್ತಿಲ್ಲ. ಎಲ್ಲರ ಲಕ್ಷ್ಯ ಸಿದ್ಧಿಸ್ವರೂಪವಾಗಬೇಕು ಎಂದು ಆದರೆ ಸದಾ ಸಿದ್ಧಿ ಸ್ವರೂಪವಾಗುವ ವಿಧಿ ಯಾವುದನ್ನಾದರೆ ತಿಳಿಸಿದ್ದೆವೋ, ಅದನ್ನು ಪರಿಶೀಲಿಸಿಕೊಳ್ಳಿರಿ ಮಧ್ಯ ಮಧ್ಯದಲ್ಲಿ ಬುದ್ಧಿ ಸೋಮಾರಿಯಾಗಿ ಬಿಡುತ್ತಿದೆ. ಆದ್ದರಿಂದ ಆಗಾಗ ಸಿದ್ಧಿಯನ್ನು ಅನುಭವ ಮಾಡಿಕೊಳ್ಳುತ್ತಿದ್ದೀರಿ ಮತ್ತು ಆಗಾಗ ಶ್ರಮವನ್ನು ಅನುಭವ ಮಾಡಿಕೊಳ್ಳುತ್ತಿದ್ದೀರಿ.

ಬಾಪ್‌ದಾದಾರವರಿಗೆ ಮಕ್ಕಳೆಲ್ಲರ ಮೇಲಿನ ಪ್ರೀತಿಗೆ ಗುರುತು- ಮಕ್ಕಳೆಲ್ಲರೂ ಸದಾ ಸಹಜವಾಗಿ ಸಿದ್ಧಿಸ್ವರೂಪರಾಗಬೇಕು ಎಂದು ಕೊಳ್ಳುತ್ತಾರೆ. ನಿಮ್ಮ ಜಡ ಚಿತ್ರಗಳಿಂದ ಭಕ್ತಾತ್ಮರು ಸಿದ್ಧಿಯನ್ನು ಪಡೆಯುತ್ತಿದ್ದಾರೆ. ಚೈತನ್ಯದಲ್ಲಿ ನೀವು ಸಿದ್ಧಿಸ್ವರೂಪರಾಗಿದ್ದೀರಿ ಆದ್ದರಿಂದಲೇ ಜಡ ಚಿತ್ರಗಳಿಂದ ಕೂಡ ಇತರಾತ್ಮರು ಪಡೆಯುತ್ತಿದ್ದಾರೆ. ಯಾರಾದರೆ ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾಗುತ್ತಾರೆಯೋ ತ್ರಿಕಾಲದರ್ಶಿ ಸ್ಥಿತಿ ಅರ್ಥಾತ್ ಸಮರ್ಥಸ್ಥಿತಿ. ಈ ರೀತಿಯ ಸಮರ್ಥಸ್ಥಿತಿ ಇರುವವರು ವ್ಯರ್ಥವನ್ನು ಎಷ್ಟು ಸಹಜವಾಗಿ ಸಮಾಪ್ತಿ ಮಾಡುತ್ತಾರೆ ಎಂದರೆ ಕನಸಿನಲ್ಲಿ ಕೂಡ ವ್ಯರ್ಥವೆಂಬುದು ಸಮಾಪ್ತಿಯಾಗಿ ಬಿಡುತ್ತದೆ. ಒಂದು ವೇಳೆ ತ್ರಿಕಾಲದರ್ಶಿ ಬುದ್ಧಿಯಿಂದ ಕರ್ಮ ಮಾಡದಿದ್ದರೆ ವ್ಯರ್ಥದ ಭಾರ ಮಾತು ಮಾತಿಗೆ ಉನ್ನತ ನಂಬರ್‌ನ ಅಧಿಕಾರಿಯಾಗಲು ಬಿಡುವುದಿಲ್ಲ ಆದ್ದರಿಂದ ದಿವ್ಯ ಬುದ್ಧಿಯ ವರದಾನವನ್ನು ಪ್ರತಿ ಸಮಯ ಕಾರ್ಯದಲ್ಲಿ ಉಪಯೋಗಿಸಿರಿ.

ಬಾಪ್‌ದಾದಾ ಇಷ್ಟಕ್ಕೆ ಮುಂಚೆ ಕೂಡ ಸನ್ನೆ ಮಾಡಿ ತಿಳಿಸಿದ್ದರು - ಜ್ಞಾನಿ, ಯೋಗಿ ಆತ್ಮರಾಗಿ ಎಲ್ಲರೂ ಆಗಿದ್ದೀರಿ ಆದರೆ ಈಗ ಜ್ಞಾನವನ್ನು ಮತ್ತು ಯೋಗವನ್ನು, ಶಕ್ತಿಯನ್ನು ಪ್ರಯೋಗದಲ್ಲಿ ತರುವ ಪ್ರಯೋಗಶಾಲಿ ಆತ್ಮರಂತೆ ಆಗಿರಿ. ವಿಜ್ಞಾನ ಶಕ್ತಿಯ ಪ್ರಯೋಗ ಕಾಣಿಸುತ್ತದೆಯಲ್ಲವೇ ಆದರೆ ವಿಜ್ಞಾನ ಶಕ್ತಿಯ ಪ್ರಯೋಗಕ್ಕೆ ಕೂಡ ಮುಖ್ಯ ಆಧಾರವೇನು? ಇಂದು ವಿಜ್ಞಾನ ಯಾವ ಪ್ರಯೋಗ ಸಾಧನಗಳನ್ನು ಕೊಟ್ಟಿದೆಯೋ ಅವೆಲ್ಲವುಗಳ ಆಧಾರವೇನು? ವಿಜ್ಞಾನ ಶಕ್ತಿಯ ಪ್ರಯೋಗಕ್ಕೆ ಆಧಾರವೇನು ಅವುಗಳಿಗೆ ಬಹಳಷ್ಟು ಲೈಟ್(ಕರೆಂಟ್) ಬೇಕು. ಲೈಟ್ ನಿಂದಲೇ ಪ್ರಯೋಗ ನಡೆಯುತ್ತದೆ. ಕಂಪ್ಯೂಟರ್ ಆದರೂ ಯಾವುದರ ಆಧಾರದಿಂದ ಕೆಲಸ ಮಾಡುತ್ತದೆ? ಕಂಪ್ಯೂಟರ್ ಎಂಬುದು ಒಂದು ಶಕ್ತಿ ಆದರೆ ಅದಕ್ಕೆ ಆಧಾರ ಕೂಡ ಲೈಟ್ ಅಲ್ಲವೇ? ನಿಮ್ಮ ಶಾಂತಿ ಶಕ್ತಿಗೆ ಕೂಡ ಆಧಾರವೇನು? ಲೈಟಲ್ಲವೇ ಅವರು ಪ್ರಕೃತಿಯ ಒಂದು ಲೈಟ್ನ ಆಧಾರದಿಂದ ಅನೇಕ ವಿಧವಾದ ಪ್ರಯೋಗಗಳನ್ನು ಪ್ರತ್ಯಕ್ಷದಲ್ಲಿ ಮಾಡಿ ತೋರಿಸಿದ್ದಾರೆ. ನಿಮ್ಮ ಅವಿನಾಶಿ ಪರಮಾತ್ಮ ಲೈಟ್, ಆತ್ಮಿಕ ಲೈಟ್ ಮತ್ತು ಪ್ರತ್ಯಕ್ಷ ಲೈಟ್ನ ಸ್ಥಿತಿಯ ಆಧಾರದಿಂದ ಆಗದ ಪ್ರಯೋಗವೇನಿರುತ್ತದೆ? ನಿಮ್ಮ ಸ್ಥಿತಿ ಕೂಡ ಲೈಟ್ ಮತ್ತು ನಿಮ್ಮ ಸ್ವರೂಪ ಕೂಡ ಲೈಟ್ ಆದ್ದರಿಂದ ಯಾವಾಗಲಾದರೂ ಯಾವುದಾದರೂ ಪ್ರಯೋಗವನ್ನು ಮಾಡಬೇಕೆಂದುಕೊಂಡಾಗ ನಿಮ್ಮ ಮುಖ್ಯ ಆಧಾರವನ್ನು ಪರಿಶೀಲಿಸಿಕೊಳ್ಳಿರಿ. ಯಾವ ವಿಜ್ಞಾನ ಸಾಧನವನ್ನಾದರೂ ಉಪಯೋಗಿಸುತ್ತಿರುವಾಗ ಲೈಟ್ ಇದೆಯೋ ಇಲ್ಲವೋ ಎಂದು ಪರಿಶೀಲಿಸುತ್ತಾರೆ ತಾನೆ? ಹಾಗೆಯೇ ಯೋಗದ, ಶಕ್ತಿಗಳ,

ಗುಣಗಳ ಪ್ರಯೋಗ ಮಾಡುತ್ತಿರುವಾಗ ಮೊದಲು ಮುಖ್ಯ ಆಧಾರವಾದ ಆತ್ಮಿಕ ಶಕ್ತಿ, ಪರಮಾತ್ಮ ಶಕ್ತಿ ಅಥವಾ ಲೈಟ್ ಸ್ಥಿತಿ(ಹಗುರ ಸ್ಥಿತಿ) ಇದೆಯೇ ಎಂದು ಪರಿಶೀಲನೆ ಮಾಡಿಕೊಳ್ಳಿ. ಸ್ಥಿತಿ ಮತ್ತು ಸ್ವರೂಪ ಡಬಲ್ ಲೈಟ್ ಆಗಿದ್ದರೆ ಸಹಜವಾಗಿ ಪ್ರಯೋಗದ ಸಫಲತೆಯನ್ನು ಪಡೆಯುತ್ತೀರಿ. ಎಲ್ಲದಕ್ಕಿಂತಲೂ ಮೊದಲು ಈ ಅಭ್ಯಾಸವನ್ನು ಶಕ್ತಿಶಾಲಿಯಾಗಿ ಮಾಡಿಕೊಳ್ಳಲು ಮೊದಲು ನಿಮ್ಮ ಮೇಲೆ ಪ್ರಯೋಗ ಮಾಡಿಕೊಂಡು ನೋಡಿರಿ. ಪ್ರತಿ ತಿಂಗಳು ಅಥವಾ ಪ್ರತಿ 15 ದಿನಗಳಿಗೆ ಯಾವುದೋ ಒಂದು ವಿಶೇಷ ಗುಣ ಅಥವಾ ವಿಶೇಷ ಶಕ್ತಿಯನ್ನು ಸ್ವಯಂನಲ್ಲಿ ಪ್ರಯೋಗಿಸಿ ನೋಡಿ ಏಕೆಂದರೆ ಸಂಘಟನೆಯಲ್ಲಿ ಅಥವಾ ಸಂಬಂಧ ಸಂಪರ್ಕಗಳಲ್ಲಿ ಪರೀಕ್ಷೆಗಳಂತೂ ಬರುತ್ತಲೇ ಇರುತ್ತವೆ ಆದ್ದರಿಂದ ಮೊದಲು ನಿಮ್ಮ ಮೇಲೆ ಪ್ರಯೋಗ ಮಾಡಿ ಪರಿಶೀಲಿಸಿಕೊಳ್ಳಿರಿ. ಯಾವ ಪರೀಕ್ಷೆ ಬಂದರೂ ಯಾವ ಶಕ್ತಿ ಅಥವಾ ಯಾವ ಗುಣವನ್ನು ಉಪಯೋಗಿಸಿಕೊಳ್ಳಬೇಕೆಂಬ ಲಕ್ಷ್ಯ ಇಟ್ಟುಕೊಂಡಿರುವಿರೋ ಅದರಲ್ಲಿ ಎಷ್ಟರವರಿಗೆ ಸಫಲತೆ ಬಂದಿದೆ ಮತ್ತು ಎಷ್ಟು ಸಮಯದಲ್ಲಿ ಸಫಲತೆ ಬಂದಿದೆ ಎಂದು ನೋಡಿಕೊಳ್ಳಿರಿ. ವಿಜ್ಞಾನದ ಪ್ರಯೋಗ ದಿನದಿಂದ ದಿನಕ್ಕೆ ಬಹಳ ಸಮಯದಲ್ಲಿ ಪ್ರತ್ಯಕ್ಷ ರೂಪದ ಅನುಭವ ಮಾಡಿಸುವುದರಲ್ಲಿ ಮುಂದಕ್ಕೆ ಹೋಗುತ್ತಿದೆ. ಸಮಯ ಕೂಡ ಕಡಿಮೆ ಮಾಡಿಕೊಳ್ಳುತ್ತಾ ಹೋಗುತ್ತಿದ್ದಾರೆ. ಕಡಿಮೆ ಸಮಯದಲ್ಲಿ ಸಫಲತೆ ಹೆಚ್ಚು ಲಭಿಸಬೇಕು. ವಿಜ್ಞಾನದ ಲಕ್ಷ್ಯ ಕೂಡ ಇದೇ ಆಗಿದೆ. ಹಾಗೆಯೇ ನೀವು ಕೂಡ ಯಾವ ಲಕ್ಷ್ಯವನ್ನಾದರೆ ಇಟ್ಟುಕೊಂಡಿದ್ದೀರೋ ಅದರಲ್ಲಿ ಸಮಯವನ್ನು ಕೂಡ ಪರಿಶೀಲಿಸಿಕೊಳ್ಳಿರಿ ಮತ್ತು ಸಫಲತೆಯನ್ನು ಕೂಡ ಪರಿಶೀಲಿಸಿಕೊಳ್ಳಿ. ಯಾವಾಗ ಸ್ವಯಂನ ಪ್ರತಿ ಪ್ರಯೋಗದಲ್ಲಿ ಸಫಲವಾಗುತ್ತಿರೋ ಆಗ ಇತರರ ಮೇಲೆ ಉಪಯೋಗಿಸುವುದು ಸಹಜವಾಗುತ್ತದೆ ಮತ್ತು ಯಾವಾಗ ಸ್ವಯಂನ ಪ್ರತಿ ಸಫಲತೆ ಅನುಭವ ಮಾಡಿಕೊಳ್ಳುತ್ತೀರೋ ಆಗ ನಿಮ್ಮ ಮನಸ್ಸಿನಲ್ಲಿ ಇತರರ ಪ್ರತಿ ಪ್ರಯೋಗ ಮಾಡಬೇಕೆಂಬ ಉತ್ಸಾಹ ಉಲ್ಲಾಸಗಳು ಸ್ವತಹವಾಗಿ ಹೆಚ್ಚಾಗುತ್ತಿರುತ್ತದೆ. ಇತರಾತ್ಮರ ಸಂಬಂಧ ಸಂಪರ್ಕಗಳಲ್ಲಿ ಸ್ವಯಂನ ಪ್ರಯೋಗದಿಂದ ಆ ಆತ್ಮರ ಮೇಲೆ ಕೂಡ ನಿಮ್ಮ ಪ್ರಯೋಗದ ಪ್ರಭಾವ ಸ್ವತಹವಾಗಿ ಬೀಳುತ್ತದೆ. ಒಂದು ಉದಾಹರಣೆ ಎದುರಿಗೆ ಇಟ್ಟುಕೊಳ್ಳಿರಿ ನಾನು ಸಹನಶಕ್ತಿಯನ್ನು ಪ್ರಯೋಗಿಸಬೇಕು ಎಂದು ನೀವು ಯೋಚಿಸಿದಾಗ ಯಾವಾಗ ಸ್ವಯಂನಲ್ಲಿ ಸಹನ ಶಕ್ತಿಯನ್ನು ಪ್ರಯೋಗಿಸುತ್ತಿರೋ ಆಗ ಯಾವ ಆತ್ಮರಾದರೇ ನಿಮ್ಮ ಸಹನಶಕ್ತಿಯನ್ನು ಅಲುಗಾಡಿಸಲು ಪ್ರಯತ್ನಿಸುತ್ತಾರೆಯೋ ಅವರು ಕೂಡ ರಕ್ಷಿಸಲ್ಪಡುತ್ತಾರಲ್ಲವೇ. ಅವರ ಲೋಪ ಕೂಡ ತೊಲಗಿ ಹೋಗುತ್ತದೆಯಲ್ಲವೇ. ಚಿಕ್ಕಚಿಕ್ಕ ಸಂಘಟನೆಯಲ್ಲಿ ಇರುತ್ತೀರಿ ಸೆಂಟರ್ಸ್ ನಲ್ಲಿ ಇರುತ್ತಿದ್ದಾಗ ಆ ಸೆಂಟರ್ಸ್ ನಲ್ಲಿ ಚಿಕ್ಕ ಸಂಘಟನೆ ಇರುತ್ತದೆಯಲ್ಲವೇ ಆದ್ದರಿಂದ ಮೊದಲು ಸ್ವಯಂನ ಪ್ರತಿ ಪ್ರಯತ್ನ ಮಾಡಿರಿ ನಂತರ ನಿಮ್ಮ ಚಿಕ್ಕ ಸಂಘಟನೆಯಲ್ಲಿ ಪ್ರಯತ್ನಿಸಿರಿ. ಸಂಘಟನೆಯಲ್ಲಿ ಯಾವುದೋ ಒಂದು ಶಕ್ತಿಯನ್ನು ಅಥವಾ ಗುಣವನ್ನು ಪ್ರಯೋಗಿಸುವ ಪ್ರೋಗ್ರಾಮನ್ನು ತಯಾರು ಮಾಡಿ ಅದರಿಂದ ಏನಾಗುತ್ತದೆ ಸಂಘಟನಾ ಶಕ್ತಿಯಿಂದ ಆ ಗುಣ ಅಥವಾ ಶಕ್ತಿಯ ವಾಯುಮಂಡಲ ತಯಾರಾಗುತ್ತದೆ ಆಗ ಆ ವಾಯುಮಂಡಲದ ಪ್ರಭಾವ ತರಂಗಗಳ ಪ್ರಭಾವ ಅನೇಕಾತ್ಮರ ಮೇಲೆ ತಪ್ಪದೆ ಬೀಳುತ್ತದೆ ಹೀಗೆ ಪ್ರಯೋಗಶಾಲಿ ಆತ್ಮರಾಗಿರಿ. ಮೊದಲು ಸ್ವಯಂನಲ್ಲಿ ಸಂತುಷ್ಟತೆಯನ್ನು ಅನುಭವ ಮಾಡಿಕೊಳ್ಳಿರಿ. ನಂತರ ಇತರರ ಪ್ರತಿ ಸಹಜವಾಗುತ್ತದೆ. ಏಕೆಂದರೆ ನಿಮಗೆ ವಿಧಿ ಬಂದುಬಿಟ್ಟಿರುತ್ತದೆ. ವಿಜ್ಞಾನದ ಸಾಧನಗಳಲ್ಲಿ ಕೂಡ ಮೊದಲು ಉದಾಹರಣೆ ರೂಪದಲ್ಲಿ ಪ್ರಯೋಗಿಸುತ್ತಾರೆ. ನಂತರ ವಿಶಾಲರೂಪದಲ್ಲಿ ಪ್ರಯೋಗಿಸುತ್ತಾರೆ ಹಾಗೆಯೇ ನೀವು ಕೂಡ ಮೊದಲು ಸ್ವಯಂನ ಮೇಲೆ ಉದಾಹರಣೆಯಾಗಿ ಉಪಯೋಗಿಸಿಕೊಳ್ಳಿರಿ. ಆಗ

ಪ್ರಯೋಗ ಮಾಡಬೇಕೆಂಬ ಆಸಕ್ತಿ ಬೆಳೆಯುತ್ತದೆ ಮತ್ತು ಮನಸ್ಸು, ಬುದ್ಧಿ ಇದರಲ್ಲಿ ಬಿಜಿಯಾಗಿ ಇರುತ್ತವೆ. ಆಗ ಚಿಕ್ಕ ಚಿಕ್ಕ ವಿಷಯಗಳಲ್ಲಿ ಉಪಯೋಗಿಸುತ್ತಿರುವ ಸಮಯ, ಶಕ್ತಿಗಳನ್ನು ಉಳಿತಾಯ ಮಾಡಬಲ್ಲಿರಿ. ಆಗ ಸಹಜವಾಗಿ ಅಂತರ್ಮುಖಿ ಸ್ಥಿತಿ ತನ್ನ ಕಡೆ ಆಕರ್ಷಣೆ ಮಾಡಿಕೊಳ್ಳುತ್ತದೆ ಏಕೆಂದರೆ ಇದರ ಪ್ರಯೋಗ ಅಥವಾ ಪ್ರಯೋಗದ ಸಫಲತೆ ಸ್ವತಹವಾಗಿ ಇತರ ಎಲ್ಲಾ ಕಡೆಗಳಿಂದ ತೊಲಗಿಸುತ್ತದೆ. ಈ ಪ್ರಯೋಗವನ್ನು ಎಲ್ಲರೂ ಮಾಡಬಲ್ಲಿರಾ ಅಥವಾ ಕಷ್ಟವೇ? ಈ ವರ್ಷ ಪ್ರಯೋಗಶಾಲಿ ಆತ್ಮರಾಗಿ. ಏನು ಮಾಡಬೇಕೋ ತಿಳಿಯಿತೇ ಹೀಗೆ ಪ್ರತಿಯೊಬ್ಬರೂ ಸ್ವಯಂನಲ್ಲಿ ಪ್ರಯೋಗ ಮಾಡುವುದರಲ್ಲಿ ನಿಮಗ್ನವಾಗಿ ಬಿಟ್ಟರೆ ಪ್ರಯೋಗಶಾಲಿ ಆತ್ಮರ ಸಂಘಟನೆ ಎಷ್ಟು ಶಕ್ತಿಶಾಲಿ ಆಗಿರುತ್ತದೆ. ಆ ಸಂಘಟನೆಯ ಕಿರಣಗಳು ಅರ್ಥಾತ್ ತರಂಗಗಳು ಬಹಳ ಕಾರ್ಯವನ್ನು ಮಾಡಿ ತೋರಿಸುತ್ತದೆ. ಇದರಲ್ಲಿ ಕೇವಲ ನಾನು ಮಾಡಲೇಬೇಕು ಎಂಬ ದೃಢತೆ ಬೇಕು, ಇತರರ ಸೋಮಾರಿತನದ ಪ್ರಭಾವ ನಿಮ್ಮ ಮೇಲೆ ಬೀಳಬಾರದು. ಇತರರ ಮೇಲೆ ನಿಮ್ಮ ದೃಢತೆಯ ಪ್ರಭಾವ ಬೀಳಬೇಕು. ಏಕೆಂದರೆ ದೃಢತಾಶಕ್ತಿ ಶ್ರೇಷ್ಠವಾದುದೇ ಅಥವಾ ಸೋಮಾರಿತನದ ಶಕ್ತಿ ಶ್ರೇಷ್ಠವಾದುದೇ. ಬಾಪ್‌ದಾದಾರವರ ವರದಾನ ಎಲ್ಲಿ ದೃಢತೆ ಇರುತ್ತದೆಯೋ ಅಲ್ಲಿ ಸಫಲತೆ ತಪ್ಪದೇ ಇರುತ್ತದೆ ಎಂದಿದೆ. ಹಾಗಾದರೆ ಯಾವ ವಿಧವಾಗಿ ತಯಾರಾಗುತ್ತಿರಿ? ಪ್ರಯೋಗಶಾಲಿ ತ್ರಿಕಾಲದರ್ಶಿ ಆಸನಧಾರಿ ಆಗಬೇಕು. ಇನ್ನು ಮೂರನೇದೇನು ಮಾಡುತ್ತೀರಿ? ಎಂತಹ ಸಮಯವೋ ಅಂತಹ ವಿಧಿಯಿಂದ ಸಿದ್ಧಿ ಸ್ವರೂಪರಾಗಬೇಕು. ಇದು ಈ ವರ್ಷದ ಹೋಂವರ್ಕ್. ಇದು ಸ್ವತಹವಾಗಿ ಬಾಬಾರವರಿಗೆ ಸಮೀಪವಾಗಿ ತರುತ್ತದೆ. ಬ್ರಹ್ಮಬಾಬಾರವರನ್ನು ನೋಡಿರುವಿರಿ ತಾನೇ? ಯಾವುದಾದರೂ ಕರ್ಮವನ್ನು ಮಾಡುವುದಕ್ಕಿಂತ ಮೊದಲು ಆದಿ, ಮಧ್ಯ, ಅಂತ್ಯಗಳನ್ನು ಆಲೋಚಿಸಿ ಅರ್ಥ ಮಾಡಿಕೊಂಡು ಕರ್ಮ ಮಾಡಿದರು ಮತ್ತು ಮಾಡಿಸಿದರು. ಹೇಗಾದರೂ ಒಳ್ಳೆಯದೇ ನಡೆಯಿರಿ, ನಡೆಯಲೇಬೇಕು ಹೀಗೆ ಸೋಮಾರಿಯಾಗಿ ಇರಲಿಲ್ಲ. ಆದ್ದರಿಂದ ಬ್ರಹ್ಮಾತಂದೆಯನ್ನು ಅನುಸರಿಸಿರಿ. ಅನುಸರಿಸುವುದು ಸಹಜವೇ ತಾನೇ? ಕಾಪಿ ಮಾಡಬೇಕಲ್ಲವೇ, ಕಾಪಿ ಮಾಡುವ ತಿಳುವಳಿಕೆ ಇದೆಯಲ್ಲವೇ!

ಒಳ್ಳೆಯದು, ಈ ಗ್ರೂಪ್ ಅವಕಾಶವನ್ನು ತೆಗೆದುಕೊಳ್ಳುವ ಗ್ರೂಪ್ ಎಕ್ಸ್ಟ್ರಾ ಲಾಟರಿ ಲಭಿಸಿದೆ. ಯಾರಿಗೆ ಅಕಸ್ಮಾತಾಗಿ ಎಕ್ಸ್ಟ್ರಾ ಲಾಟರಿ ಲಭಿಸುತ್ತದೆಯೋ ಅವರಿಗೆ ಬಹಳ ಹೆಚ್ಚು ಖುಷಿ ಇರುತ್ತದೆ. ಈ ಗ್ರೂಪ್ ಲಕ್ಕಿ ಗ್ರೂಪ್ ಆಗಿದೆಯಲ್ಲವೇ. ಅವಕಾಶ ತೆಗೆದುಕೊಳ್ಳುವ ಲಕ್ಕಿ ಗ್ರೂಪ್. ಇತರರು ಇನ್ನೂ ಯಾವಾಗ ಹೋಗುವುದು ಎಂದು ಯೋಚಿಸುತ್ತಿದ್ದಾರೆ ಆದರೆ ನೀವು ಬಂದುಬಿಟ್ಟಿದ್ದೀರಿ. ಈಗ ಡಬಲ್ ವಿದೇಶಿಯರ ಟರ್ನ್ ಪ್ರಾರಂಭವಾಗುತ್ತದೆ ಭಾರತವಾಸಿಯರು ತಮ್ಮ ಲಾಟರಿ ತೆಗೆದುಕೊಳ್ಳುತ್ತಿದ್ದಾರೆ. ನಾಲ್ಕು ಕಡೆಯ ಡಬಲ್ ವಿದೇಶಿ ಮಕ್ಕಳು ಯಾವ ರಿಟ್ರೀಟ್ ಅನ್ನಾದರೆ ತಯಾರು ಮಾಡುತ್ತಾರೆಯೋ ಅದರಲ್ಲಿ ಒಳ್ಳೆಯ ಶ್ರಮ ಮಾಡಿದ್ದಾರೆ. ವಿಶೇಷ ನಿಮಿತ್ತ ಆತ್ಮರನ್ನು ಸಮೀಪವಾಗಿ ತರುವ ವಿಧಿ ಬಹಳ ಚೆನ್ನಾಗಿದೆ ಮತ್ತು ಎಷ್ಟು ಧೈರ್ಯವಿಟ್ಟು ಮುಂದಕ್ಕೆ ಹೋಗುತ್ತಾ ಇರುತ್ತೀರೋ ಅಷ್ಟು ಸಫಲತೆ ಎಂಬುದು ಪ್ರತಿವರ್ಷ ಶ್ರೇಷ್ಠಾತಿ ಶ್ರೇಷ್ಠವಾಗಿ ಲಭಿಸುತ್ತದೆ. ಹೀಗೆ ಅನುಭವವಾಗುತ್ತಿದೆಯಲ್ಲವೇ ಒಂದಾನೊಂದು ಸಮಯದಲ್ಲಾದರೆ ನಿಮಿತ್ತ ವಿಶೇಷಾತ್ಮರೊಂದಿಗೆ ಸಂಪರ್ಕದಲ್ಲಿ ಬರುವುದು ಕೂಡ ಕಷ್ಟವೆನಿಸುತ್ತಿತ್ತು ಆದರೆ ಈಗೇನೆನಿಸುತ್ತದೆ. ನೀವು ಎಷ್ಟು ಎಂದುಕೊಳ್ಳುತ್ತಿದ್ದೀರೋ ಅಷ್ಟಕ್ಕಿಂತ ಇನ್ನೂ ಹೆಚ್ಚು ಬರುತ್ತಿದ್ದಾರೆ ತಾನೆ! ಇದು ಧೈರ್ಯಕ್ಕೆ ಪ್ರತ್ಯಕ್ಷ ಫಲ. ಭಾರತ ದೇಶದಲ್ಲಿ

ಕೂಡ ಸಂಪರ್ಕ ಬೆಳೆಯುತ್ತಿದೆ ಮೊದಲು ನೀವು ಆಹ್ವಾನಿಸಿದಾಗ ಶ್ರಮಪಡುತ್ತಿದ್ದರು ಮತ್ತು ಈಗ ಅವರೇ ಸ್ವಯಂ ಬರಲು ಆಫರ್ ಮಾಡುತ್ತಿದ್ದಾರೆ ಅಂತರ ಬಂತಲ್ಲವೇ? ಅವರು ನಾವು ಹೋಗುತ್ತೇವೆ ಎಂದು ಹೇಳುತ್ತಿದ್ದಾರೆ ನೀವು ಸಂಖ್ಯೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದೀರಿ ಇದು ಧೈರ್ಯವಂತರಾದ ಮಕ್ಕಳಿಗೆ ತಂದೆಯ ಸಹಾಯ ಮಾಡುತ್ತಾರೆ ಎಂಬುದಕ್ಕೆ ಪ್ರತ್ಯಕ್ಷ ಸ್ವರೂಪ, ಒಳ್ಳೆಯದು.

**ನಾಲ್ಕು ಕಡೆ ಇರುವ ಮಾಸ್ಟರ್ ತ್ರಿಕಾಲದರ್ಶಿ ಆತ್ಮರಿಗೆ, ಸದಾ ಸಮಯದ ಶ್ರೇಷ್ಠತೆಯನ್ನು ತಿಳಿದು ಮತ್ತು ಸಮಪ್ರಮಾಣವಾಗಿ ಖಜಾನೆಗಳನ್ನು ಕಾರ್ಯದಲ್ಲಿ ಉಪಯೋಗಿಸುವ ಪ್ರಯೋಗಶಾಲಿ ಆತ್ಮರಿಗೆ, ಸದಾ ಧೈರ್ಯದಿಂದ ತಂದೆಯ ಸಹಾಯವನ್ನು ಪ್ರತ್ಯಕ್ಷವಾಗಿ ಅನುಭವ ಮಾಡಿಕೊಳ್ಳುವ ಆತ್ಮರಿಗೆ, ಬಾಪ್‌ದಾದಾವರ ಪ್ರಿಯ ಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 01-02-1994.

***ತ್ರಿಕಾಲದರ್ಶಿ ಸ್ಥಿತಿ ಎಂಬ ಶ್ರೇಷ್ಠ ಆಸನದಿಂದ ಸದಾ ವಿಜಯಿಯಾಗಿರಿ***

ತ್ರಿಕಾಲದರ್ಶಿಯಾಗುವ ಸಾಧನವಾದ ದಿವ್ಯಬುದ್ಧಿಯ ವರದಾನವನ್ನು ಅಥವಾ ಬ್ರಾಹ್ಮಣ ಜನ್ಮದ ವಿಶೇಷ ಬಹುಮಾನವನ್ನು ಬಾಪ್‌ದಾದಾ ಪ್ರತಿಯೊಬ್ಬ ಮಗುವಿಗೆ ಕೊಟ್ಟಿದ್ದಾರೆ ಏಕೆಂದರೆ ದಿವ್ಯ ಬುದ್ಧಿಯಿಂದಲೇ ತಂದೆಯನ್ನು ಸ್ವಯಂನ್ನು ಮತ್ತು ಮೂರು ಕಾಲಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು ಆದರೆ ಪ್ರತ್ಯಕ್ಷ ಜೀವನದಲ್ಲಿ ನಂಬರ್‌ವಾರ್‌ಆಗಿ ಕಾರ್ಯದಲ್ಲಿ ಉಪಯೋಗಿಸುತ್ತಿದ್ದಾರೆ. ನಾಲ್ಕು ಸಬ್ಜೆಕ್ಟ್ ಗಳನ್ನು ಧಾರಣೆ ಮಾಡಲು ಆಧಾರ ದಿವ್ಯಬುದ್ಧಿ. ತ್ರಿಕಾಲದರ್ಶಿ ಬುದ್ಧಿಯುಳ್ಳವರು ಎಂದೂ ಅಸಫಲತೆಯನ್ನು ಅನುಭವ ಮಾಡಿಕೊಳ್ಳುವುದಿಲ್ಲ ಆದರೆ ಮಕ್ಕಳಲ್ಲಿ ಮೂರು ವಿಧವಾದ ಬುದ್ದಿಯುಳ್ಳವರು ಇದ್ದಾರೆ. 1.ಸದಾ ತ್ರಿಕಾಲದರ್ಶಿ ಬುದ್ಧಿ, 2.ಆಗಾಗ ತ್ರಿಕಾಲದರ್ಶಿ ಆಗಾಗ ಏಕಕಾಲದರ್ಶನದ ಬುದ್ಧಿ 3.ಸೋಮಾರಿತನ (ಆಲಸ್ಯ)ದ ಬುದ್ಧಿ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಮಾಸ್ಟರ್ ಸರ್ವಶಕ್ತಿವಂತನು, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮಾಸ್ಟರ್ ತ್ರಿಕಾಲದರ್ಶಿ ಸ್ವರೂಪ.

2. ನಾನು ಬ್ರಾಹ್ಮಣ ಜನ್ಮದ ವಿಶೇಷ ವರದಾನವಾದ ದಿವ್ಯ ಬುದ್ಧಿಯ ವರದಾನಿ.

3. ನಾನು ದಿವ್ಯ ಬುದ್ಧಿ ಮತ್ತು ಸ್ಮೃತಿಯಿಂದ ಸರ್ವ ಶಕ್ತಿಗಳನ್ನು ಮತ್ತು ಜ್ಞಾನದ ನಾಲ್ಕು ಸಬ್ಜೆಕ್ಟ್ ಗಳನ್ನು ಧಾರಣೆ ಮಾಡಿದ್ದೇನೆ.

4. ನಾನು ಸಂಕಲ್ಪವನ್ನು ವಾಣಿ ಮತ್ತು ಕರ್ಮದಲ್ಲಿ ತರುವ ಮೊದಲು ಪ್ರತಿಯೊಂದು ಮಾತು ಮತ್ತು ಕರ್ಮದ ಮೂರೂ ಕಾಲಗಳನ್ನು ತಿಳಿದು ಪ್ರತ್ಯಕ್ಷದಲ್ಲಿ ತರುವ ತ್ರಿಕಾಲದರ್ಶಿ ಸ್ವರೂಪ.

5. ನಾನು ತ್ರಿಕಾಲದರ್ಶಿ ಸ್ಥಿತಿಯಿಂದ ವಿಜಯಿಯಾಗಿ ಶಕ್ತಿಯನ್ನು, ಸಹಯೋಗವನ್ನು ಕೊಡುವ ವಿಶಾಲಬುದ್ಧಿ, ಬೇಹದ್ ಬುದ್ದಿಯುಳ್ಳವನು.

6. ನಾನು ಸಮಯ ಪ್ರಮಾಣವಾಗಿ ಜ್ಞಾನವನ್ನು, ಶಕ್ತಿಯನ್ನು, ಗುಣಗಳನ್ನು ಉಪಯೋಗಿಸುವ ನಂಬರ್‌ವನ್ ವಿದ್ಯಾರ್ಥಿ.

7. ನಾನು ಪ್ರತಿಯೊಂದು ಸಂಕಲ್ಪವನ್ನು ತ್ರಿಕಾಲದರ್ಶಿ ಸ್ಥಿತಿಯಲ್ಲಿದ್ದು ಪರಿಶೀಲಿಸಿ, ಶಕ್ತಿಶಾಲಿಯನ್ನಾಗಿ ಮಾಡಿಕೊಂಡು, ವಾಚ ಮತ್ತು ಕರ್ಮಣಾದಲ್ಲಿ ತಂದು ಸಹಜ ಸಫಲತೆಯನ್ನು ಪಡೆದಿರುವ ಸಿದ್ಧಿ ಸ್ವರೂಪ.

8. ನಾನು ತ್ರಿಕಾಲದರ್ಶಿ ಸ್ಥಿತಿಯಲ್ಲಿದ್ದು ಕರ್ಮವನ್ನಾಚರಿಸಿ ವ್ಯರ್ಥವನ್ನು ಸಹಜವಾಗಿ ಸಮಾಪ್ತಿ ಮಾಡುವ ದಿವ್ಯ ಬುದ್ಧಿ ಸ್ವರೂಪ, ಸಮರ್ಥ ಸ್ವರೂಪ.

9. ನಾನು ಪರಮಾತ್ಮನ ಲೈಟ್, ಆತ್ಮನ ಲೈಟ್ ಮತ್ತು ಪ್ರತ್ಯಕ್ಷ ಲೈಟ್ (ಸ್ಥಿತಿಯ ಆಧಾರದಿಂದ) ಜ್ಞಾನವನ್ನು, ಯೋಗವನ್ನು ಮತ್ತು ಶಕ್ತಿಯನ್ನು ಪ್ರಯೋಗದಲ್ಲಿ ತರುವ ಪ್ರಯೋಗಶಾಲಿ ಆತ್ಮ.

10. ನಾನು ನನ್ನ ಸ್ಥಿತಿ ಮತ್ತು ಸ್ವರೂಪದಿಂದ ಪ್ರಯೋಗದಲ್ಲಿ ಸಫಲತೆಯನ್ನು ಪಡೆಯುವ ಡಬಲ್ ಲೈಟ್ ಸ್ವರೂಪ.

11. ನಾನು ಯಾವ ಶಕ್ತಿ ಅಥವಾ ಯಾವ ಗುಣವನ್ನಾದರೆ ಉಪಯೋಗಿಸಿಕೊಳ್ಳಬೇಕೆಂಬ ಲಕ್ಷ್ಯವನ್ನು ಇಟ್ಟಿದ್ದೇನೆಯೋ ಅದರಲ್ಲಿ ಎಷ್ಟರವರೆಗೆ ಸಫಲತೆಯು ಎಷ್ಟು ಸಮಯದಲ್ಲಿ ಬಂದಿದೆ ಎಂದು ನೋಡಿಕೊಳ್ಳುತ್ತಿದ್ದೇನೆ.

12. ನಾನು ಸಂಘಟನಾ ಶಕ್ತಿಯಿಂದ ಶಕ್ತಿಯನ್ನು, ಗುಣವನ್ನು ಪ್ರಯೋಗಿಸಿ ವಾಯುಮಂಡಲವನ್ನು ತಯಾರು ಮಾಡುತ್ತಿದ್ದೇನೆ.

13. ನಾನು ದೃಢತೆಯ ಶಕ್ತಿಯಿಂದ ಸ್ವಯಂನ ಮೇಲೆ ಗುಣ ಹಾಗೂ ಶಕ್ತಿಯನ್ನು ಪ್ರಯೋಗಿಸಿ ಇತರರ ಮೇಲೆ ಕೂಡ ಪ್ರಯೋಗ ಮಾಡಬೇಕೆಂಬ ಆಸಕ್ತಿಯನ್ನು ಬೆಳೆಸಿಕೊಂಡು ಮನಸ್ಸು, ಬುದ್ಧಿಯನ್ನು ಇದರಲ್ಲಿ ಬಿಜಿಯಾಗಿಸಿಕೊಂಡು ಸಮಯ ಮತ್ತು ಶಕ್ತಿಯನ್ನು ಉಳಿತಾಯ ಮಾಡಿದ್ದೇನೆ. ಮತ್ತು ಅಂತರ್ಮುಖಿ ಸ್ಥಿತಿಯಲ್ಲಿದ್ದೇನೆ.

14. ನಾನು ಬ್ರಹ್ಮಾ ತಂದೆಯನ್ನು ಅನುಸರಿಸುತ್ತಾ.. ಕರ್ಮವನ್ನಾಚರಿಸುವುದಕ್ಕಿಂತ ಮೊದಲೇ ಆದಿ, ಮಧ್ಯ, ಅಂತ್ಯಗಳನ್ನು ಆಲೋಚಿಸಿ, ಅರ್ಥ ಮಾಡಿಕೊಂಡು ಕರ್ಮವನ್ನು ಮಾಡುತ್ತಿದ್ದೇನೆ.

15. ನಾನು ಧೈರ್ಯದಿಂದ ತಂದೆಯ ಸಹಯೋಗವನ್ನು ಅನುಭವ ಮಾಡುತ್ತಿರುವ ಪ್ರತ್ಯಕ್ಷ ಸ್ವರೂಪ.